ನಂತರ ಅದನ್ನು ಕಾರ್ಯಗತಗೊಳಿಸುವುದಕ್ಕೆ ಪ್ರಾರಂಭ ಮಾಡುತ್ತೇವೆ. ಆಮೇಲೆ ಮಾನ್ಯ ಸದಸ್ಯರಿಗೆ ಇದರಲ್ಲಿ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ, ಅದಕ್ಕೆ ಎಷ್ಟು ಹಣ ಒದಗಿಸುತ್ತೀರಿ ಎಂದು ಕೇಳಿರುವುದಕ್ಕೆ ಉತ್ತರವಾಗಿ ಐಎಸ್‌ಬಿಯಲ್ಲಿ ಕೇಂದ್ರ ಸರ್ಕಾರವಿನೇನು ನಿರ್ದೇಶಗಳನ್ನು ಕೊಟ್ಟಿದೆಯೋ ಆ ಪರ್ಸೆಂಟೇಜ್‌ಗಳನ್ನು ಸಂಪೂರ್ಣವಾಗಿ ಪಾಲನೆ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ:— ಈ ಐಎನ್‌ಟಿಸಿ ಪ್ರೋಗ್ರಾಮ್ ಏನಿದೆ ಅದಂ ಕೇಂದ್ರದಿಂದ ಹಣ ಬಳಸಿ ಎಂದು ಬಂದಿರುತ್ತದೆಂದು ನಜೀರ್ ಸಾಬರು ಹೇಳಿದ್ದರು. ನಾವು ಇದನ್ನು ನಿಲ್ಲಿಸಬೇಕೋ ಬಿಡಬೇಕೋ ಎಂದು ಆಲೋಚನೆಯಲ್ಲಿದ್ದೇವೆಂದೂ ಹೇಳಿದ್ದರು.

ಶ್ರೀ ಅಬ್ದುಲ್ ನಜೀರ್ ಸಾಬ್.—ನಾನಂ ಆ ರೀತಿ ಹೇಳಿಲ್ಲ

ಶ್ರೀ ಬಿ. ಬಸವಲಿಂಗಪ್ಪ.—ಈ ಪ್ರೋಗ್ರಾಮನ್ನು ಕಾರ್ಯಗತ ಮಾಡುವಾಗ ಯಾವ ಗ್ರಾಪಂದಲ್ಲೂ ಕೂಡ ಸರಿಯಾಗಿ ಅಕ್ಷರಶಃ ಜಾರಿಗೆ ಕೊಡುತ್ತಿಲ್ಲ. ಹಣ ಖರ್ಚು ಮಾಡುತ್ತಿದ್ದೇವೆ, ಯಾರಂ ಫಲಾನು ಭವಿಗಳಿದ್ದಾರೆ ಅಂಥವರಿಗೆ ನೇರವಾಗಿ ಸಹಾಯವಾಗುವಲ್ಲಿ ಅಡ್ಡಿಬರುವ ಅಡಚಣೆಗಳನ್ನು ಸರಿಪಡಿಸುವುದಕ್ಕೆ ನೀವು ಏನು ಪ್ರಯತ್ನ ಮಾಡುತ್ತಿದ್ದೀರಿ ? ಮತ್ತು ಬಿಆರ್‌ಡಿಪಿ ಪ್ರೋಗ್ರಾಮ್‌ನಲ್ಲಿ ಕೇಂದ್ರ ೫೦ ಪರ್ಸೆಂಟ್ ಕೊಟ್ಟಿದೆ. ನೀವು ಉಳಿದ ಹಣ ಖರ್ಚು ಮಾಡುವುದಕ್ಕೋಸ್ಕರ ಯಾವಾಗ ಒದಗಿಸಿದಿರಿ? ನನ್ನ ಆರೋಪ ಏನೆಂದರೆ ನೀವು ಕಳೆದೆರಡು ಮೂರಂ ತಿಂಗಳಿಂದ ಮಾತ್ರ ಹಣ ಕೊಟ್ಟಿದ್ದೀರಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಹಿರಿಯಂ ಸದಸ್ಯರಾದ ಬಸವಲಿಂಗಪ್ಪನವರು ಹೆಚ್ಚು ವಿಷಯಂ ತಿಳಿದುಕೊಂಡು ಪಾತನಾಡುವವರು. ಅವರಿಗೆ ಸಿಕ್ಕಿರುವ ಮಾಹಿತಿ ಸರಿಯಾದ್ದಲ್ಲ. ಅವರು ಹೇಳಿದಂತೆ ನಾನಂ ಎಲ್ಲೂ ಹೇಳಿಲಿಲ್ಲ. ಇದು ಸಂಧಾರಣೆಯಾಗಬೇಕೆಂದು ಹೇಳಿದ್ದೇನೆ. ಸಮಾಜ ದಲ್ಲಿರುವ ಕಟ್ಟಕಡೆಯಂ ಫಲಾನುಭವಿಗಳಾಗುವವರನ್ನು ಗುರ್ತಿಸಂವ ಕಾರ್ಯದಲ್ಲಿ ಅನೇಕ ಅನಿಷ್ಟಗಳನ್ನು ನಿವಾರಿಸುವ ದೃಷ್ಟಿಯಿಂದ ಇದಕ್ಕೆ ಸಾಮೂಹಿಕ ಒತ್ತನ್ನು ಕೊಡಬೇಕು. ಉದಾಹರಣೆಗೆ ಎತ್ತುಗಳನ್ನು, ಎಮ್ಮೆಗಳನ್ನು ಕೊಡುವಾಗ ಅಧಿಕಾರಿಗಳೆಲ್ಲಿ ಇರಬೇಕು. ಪೂರಕವಾಗಿ ವ್ಯವಸ್ಥೆಗಳಾಗಿರಬೇಕು. ಇದು ಕೇಂದ್ರದ ನಿರ್ದೇಶನ. ದಿಲ್ಲಿಯ ಯೂನಿವರ್ಸಿಟಿಯವರು ನಡೆಸಿದ ಸರ್ವೆಯೊಂದರ ಔಟ್‌ಕಮ್ ಎಂದರೆ ಬೇರಾವುದೇ ರಾಜ್ಯಕ್ಕಿಂತ ಕರ್ನಾಟಕದಲ್ಲಿ ಶೇಕಡ ೭೦ರಷ್ಟು ಗ್ರಾಮಸಭೆಗಳು ಚೆನ್ನಾಗಿ ನಡೆಯುತ್ತಿವೆ ಎಂದಂ. ಗ್ರಾಮಸಭೆಗಳು ಫಲಾನುಭವಿಗಳನ್ನು ಚುನಾಯಿಸ ಬೇಕು. ಅಲ್ಲದೆ ಬೇಕಾಗಿರುವ ವಸ್ತುಗಳನ್ನು ಕೊಳ್ಳುವಾಗ ಅಧಿಕಾರಿಗಳಂ ಮತ್ತು ಟ್ರಾಂಕಿನವರು ಸೇರಿ ಮಾಡಿದರೆ ಅನ್ಯಾಯಗಳಾಗಬಹುದೆಂಬ ದೃಷ್ಟಿಯಿಂದ ಪ್ರತಿಯೊಬ್ಬ ಶಾಸಕರೂ ಸಹ ಈ ಪ್ರೊಜೆಕ್ಟ್‌ನಲ್ಲಿರಬೇಕೆಂದು ಹೇಳಿದ್ದೇವೆ. ತೃಪ್ತಿಕರವಾದ ರೀತಿಯಲ್ಲಿ ನಡೆಯದೇ ಇರಬಹುದು. ಆದರೆ ಒಟ್ಟಾರೆ ಎಲ್ಲ ದೋಷ ಪೂರಿತವಾಗಿಲ್ಲ. ಮಾನ್ಯ ಸದಸ್ಯರು ಯಾವುದಾದರೂ ಸ್ಪೆಸಿಫಿಕ್ಕಾಗಿ ಅನ್ಯಾಯವಾಗಿರುವಂಥವನ್ನು ನನ್ನ ಗಮನಕ್ಕೆ ತಂದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಉಡುಪಿ ತಾಲ್ಲೂಕಿನಲ್ಲಿ ನೀರು ಸರಬರಾಜು ಯೋಜನೆಗಳು

೧೧೫೩. ಶ್ರೀಮತಿ ಮನೋರಮಾ ಮಂಧ್ವರಾಜ್ (ಉಡುಪಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ, ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಂಟ್ಟು ಉತ್ತರಿಸುವರೆ ?

ಎ) ಸರ್ಕಾರವು ಈ ಕೆಳಕಂಡ ನೀರಂ ಸರಬರಾಜು ಯೋಜನೆಗಳನ್ನು ೧೯೮೬-೮೭ನೇ ಸಾಲಿನಲ್ಲಿ ಮಂಜೂರು ಮಾಡುವುದೆ ?

೧) ಉಡುಪಿ ತಾಲ್ಲೂಕಿನಲ್ಲಿರುವ ಉದ್ಯಾವರ ಗ್ರಾಮಕ್ಕೆ ಸೇರಿದ ಪಿತ್ರೋಡಿಗೆ ನೀರು ಸರಬರಾಜಂ ಒದಗಿಸುವುದು ?

೨) ಕೊಡಪೂರು ಗ್ರಾಮಕ್ಕೆ ಸೇರಿದ ಮೂಡಬೆಟ್ಟುವಿಗೆ ನೀರಂ ಸರಬರಾಜು ಒದಗಿಸಂವುದು.

೩) ಶಿವಳ್ಳಿ ಗ್ರಾಮಕ್ಕೆ ಸೇರಿದ ಪಂಚೋಳಿಗುಜ್ಜಿಗೆ ಹೆಚ್ಚಿಗೆ ಕೊಳವೆ ಬಾವಿಗಳನ್ನು ತೋಡಿಸಿ ನೀರು ಸರಬರಾಜಂ ಪರಿಸ್ಥಿತಿಯನ್ನು ಸುಧಾರಿಸುವುದು.

ಬಿ) ಉಡುಪಿ ತಾಲ್ಲೂಕು ಹೆರ್ಗಾ ಗ್ರಾಮಕ್ಕೆ ಸೇರಿದ ಈಶ್ವರ ನಗರ ಮತ್ತು ಶಾಂತಿನಗರದಲ್ಲಿರುವ ವಸತಿಗೃಹಗಳಿಗೆ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ ಯಡಿಯಲ್ಲಿ ಸರ್ಕಾರವು ನೀರು ಸರಬರಾಜು ಯೋಜನೆಯನ್ನು ಮಂಜೂರು ಮಾಡುವುದೆ ?

ಸಿ) ಬಜೆ ಗ್ರಾಮದಿಂದ ಆಗುತ್ತಿರುವ ನೀರು ಸರಬರಾಜು ಸದ್ಯಕ್ಕೆ ಸಾಲದೇ ಇರುವುದರಿಂದ ಸರ್ಕಾರವು ೧೯೮೬-೮೭ನೇ ಸಾಲಿನಲ್ಲಿ, ಸ್ವರ್ಣ ನದಿ ನೀರು ಸರಬರಾಜು ಯೋಜನೆಯನ್ನು ಮಂಜೂರು ಮಾಡುವುದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಸಚಿವರು).—

ಎ) ೧) ಈ ಯೋಜನೆಯು ಸರ್ಕಾರದ ಮಂಜೂರಾತಿಗಾಗಿ ಪರಿಶೀಲನೆಯಲ್ಲಿದೆ.

೨) ಈ ಯೋಜನೆಯು ಮಂಜೂರಾತಿಗಾಗಿ ಸರ್ಕಾರದ ಪರಿಶೀಲನೆಯಲ್ಲಿದೆ.

೩) ದಿನಾಂಕ ೨೭-೧೨-೧೯೮೫ರಂದು ಮತ್ತೊಂದು ಕೊಳವೆ ಬಾವಿಗೆ ಸರ್ಕಾರದ ಮಂಜೂರಾತಿನೀಡಿದೆ.

ಬಿ) ಸದ್ಯಕ್ಕೆ ಈ ಬಗ್ಗೆ ಪ್ರಸ್ತಾಪನೆ ಇಲ್ಲ.

ಸಿ) ಈ ವಿಷಯವು ವಸತಿ ಹಾಗೂ ನಗರಾಭಿವೃದ್ಧಿ ಇಲಾಖೆಗೆ ಸಂಬಂದಿಸಿದ್ದು. ಈ ಇಲಾಖೆಯಂ ವ್ಯಾಪ್ತಿಗೆ ಬರುವುದಿಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್.—ಸಭಾಧ್ಯಕ್ಷರೇ ನನ್ನ ಬಿ ಪ್ರಶ್ನೆಗೆ ಸದ್ಯಕ್ಕೆ ಆ ಬಗ್ಗೆ ಪ್ರಸ್ತಾವನೇ ಇಲ್ಲ ಎಂದಿದ್ದಾರೆ. ಅಂದರೆ ಅಲ್ಲಿ ಜನ ನೀರಿಲ್ಲದೆ ಸಾಯಬೇಕು ಎಂದರ್ಥವೇ? ಎಲ್ಲರೂ ನಜೀರ್‌ಸಾಬರನ್ನು ನೀರುಸಾಬರು ಎಂದು ಕರೆಯುತ್ತಿದ್ದರೂ ಅವರು ಏಕೆ ನೀರು ಪೂರೈಕೆಗೆ ಆಶ್ವಾಸನೆ ಕೊಡುತ್ತಿಲ್ಲ?

ಅಧ್ಯಕ್ಷರು.—ಕೊಡಿರಿ ಆಶ್ವಾಸನೆಯನ್ನು.

ಶ್ರೀ ಬಿ.ಆರ್. ಯಾವಗಲ್.—ಅಧ್ಯಕ್ಷರೇ ಇದು ಭಾರದ ಆಶ್ವಾಸನೆಯಾಗುತ್ತದೆ. ೯ ಲಕ್ಷ ರೂಪಾಯಿಗಳು ಬೇಕು. ಅಂದಾಜು ತಯಾರಿಸಿಟ್ಟಿದ್ದೇವೆ. ಹತ್ತಿರದ ಶಾಂತಿನಗರ ಮಂತ್ತಿತರ ಪ್ರದೇಶಗಳೂ ಬೆಳೆಯುತ್ತಿವೆ. ಆದರೆ ಇಷ್ಟೊಂದು ಹಣ ಸದ್ಯಕ್ಕೆ ಕೊಡಲು ಸಾಧ್ಯವಿಲ್ಲ. ಮುಂದೆ ಇದನ್ನು ಪರಿಶೀಲಿಸಲಾಗುವುದು.

ಶ್ರೀಮತಿ ಮನೋರಮಾ ಮಧ್ವರಾಜ್.—ಎಷ್ಟು ಸಮಯಕ್ಕೆ ಮಾಡಿಸಿಕೊಡುತ್ತೀರಿ ಎಂದು ಹೇಳಬೇಕು.

ಅಧ್ಯಕ್ಷರು.—ಆದಷ್ಟು ಬೇಗ ಎಂದು ಹೇಳಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಬೇಗ ಮಾಡಿಸಿಕೊಟ್ಟರೆ ಅವರಿಗಿಂತ ಸಂತೋಷ ನಮಗೇ ಜಾಸ್ತಿ. ಕೊಳವೆ ಬಾವಿ ಬೇಕಾದರೆ ಕೇಳಿ, ತಕ್ಷಣವೇ ಹಾಕಿಸಿಕೊಡುತ್ತೇನೆ. ಆದರೆ ಕೊಳವೆ ಮುಖಾಂತರ ನೀರು ಪೂರೈಕೆ ಮಾಡಬೇಕೆಂದರೆ ಸಾಧ್ಯ ಸಂಪನ್ಮೂಲದ ಕೊರತೆ ಇದೆ. ಅವಕಾಶವಾದರೆ ಮುಂದಿನ ವರ್ಷ ಮಾಡಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಮಂಡಲ್ ಪಂಚಾಯಿತ್‌ನ ಸಿಬ್ಬಂದಿಗಾಗಿ ಸೇವಾ ಭದ್ರತೆ.

೧೫೩೫ ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಲಿ ಪುನರ್ ವಿಂಗಡಿಸಿರುವಂತೆ ಮಂಡಳ ಪಂಚಾಯ್ತಿಗಳಿಗೆ ಎಷ್ಟು ಪುರಸಭೆಗಳನ್ನು ಸೇರಿಸಲಾಗಿದೆ ಹಾಗೂ ಅವುಗಳ ಸಿಬ್ಬಂದಿಯನ್ನು ಮುಂದೆ ಯಾವ ಇಲಾಖೆಗೆ ವಹಿಸಲಾಗುವುದು